ಅಧ್ಯಕ್ಷರು: ನಾನು ಕಡತವನ್ನು ನೋಡುತ್ತೇನೆ.

2. ಪ್ರಶ್ನೋತ್ತರಗಳು

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ವಿಷಯ: ವಿಟ್ಲಕ್ಕೆ ಹಿಂದುಳಿದ ವರ್ಗಗಳ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯದ ಅವಶ್ಯಕತೆ.

481 (3944)

ಶ್ರೀ ರುಕ್ಕಯ್ಯ ಪೂಜಾರಿ (ವಿಟ್ಲ): ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲಕ್ಕೆ ಒಂದು ಹಿಂದುಳಿದ ವರ್ಗದ ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಬಂದಿದ್ದರೆ ಇದೇ ವರ್ಷ (97-98ನೇ ವರ್ಷಕ್ಕೆ) ವಿದ್ಯಾರ್ಥಿನಿಲಯವು ಮಂಜೂರು ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಮಾಲಿಕಯ್ಯ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಶ್ರೀ ರುಕ್ಕಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೇ, ವಿಟ್ಲದಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಮತ್ತು ಮತ್ತೊಂದು ಪದವಿ ಪೂರ್ವ ಕಾಲೇಜು ಇದೆ. ಈ ಕಾಲೇಜು ಗಳಲ್ಲಿ ಹಿಂದುಳಿದ ವರ್ಗದವರೇ ಜಾಸ್ತಿಯಾಗಿದ್ದಾರೆ. ಇವರಲ್ಲದೆ ಬಡವರು ಇದ್ದಾರೆ ಅದಕ್ಕಾಗಿ ನಾನು ಅಲ್ಲಿ ಮೆಟ್ರಿಕ್ ನಂತರದ ಹಾಸ್ಟೆಲ್‌ನ್ನು ಬೇಕು ಎಂದು ಕೇಳಿದ್ದೇನೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದಿದ್ದಾರೆ. ಆ ಹಾಸ್ಟಲ್‌ನ್ನು ಇದೇ ವರ್ಷ ದಯವಿಟ್ಟು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್: ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿ 13 ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ಹಾಸ್ಟೆಲ್‌ಗಳು ಇವೆ. ಅದರಲ್ಲಿ 7

ಬಾಲಕರ ಮತ್ತು 6 ಬಾಲಕಿಯರ ಹಾಸ್ಟೆಲ್‌ಗಳು ಇವೆ. ಈ ಹಾಸ್ಟೆಲ್‌ಗಳಿಂದ 745 ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಈ ವರ್ಷ ನಿರ್ವಹಣೆಗೆ 72 ಲಕ್ಷ ಖರ್ಚಾಗಿ 35 ಲಕ್ಷ ರೂ.ಗಳ ಕೊರತೆ ಉಂಟಾಗಿದೆ. ಮೆಟ್ರಿಕ್ ನಂತರದ ಹಾಸ್ಟೆಲ್‌ಗಳನ್ನು ಕೊಡುವ ಕಾಯಕ್ರಮವನ್ನು ಈ ವರ್ಷ ನಾವು ಹಮ್ಮಿಕೊಂಡಿಲ್ಲ. ಆದುದರಿಂದ ಇದರ ಬಗ್ಗೆ ಪರಿಶೀಲಿಸಲಾಗುವುದು ಎಂಬ ಉತ್ತರವನ್ನು ಕೊಟ್ಟಿದ್ದೇವೆ. ಇದಕ್ಕೆ ಆಯವ್ಯಯದ ಕೊರತೆಯಿರುವುದರಿಂದ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಿದ್ದೇನೆ. ಏಕೆಂದರೆ ಈ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಕೊಡುತ್ತಿಲ್ಲ. ಈಗ ಇರುವಂಥ ಹಾಸ್ಟೆಲ್‌ಗಳನ್ನೇ ಇಂಪ್ರೂವ್ ಮಾಡುತ್ತಿದ್ದೇವೆ. ಆದುದರಿಂದ ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ರುಕ್ಮಯ್ಯ ಪೂಜಾರಿ: ಈ ವರ್ಷ ಮಾಡಿಸಿಕೊಡಬೇಕು.

ಅಧ್ಯಕ್ಷರು: ಮಂತ್ರಿಗಳು ಹೇಳಿದ್ದಾರಲ್ಲಾ. ಈ ವಿಚಾರವನ್ನು ಹಣಕಾಸಿನ ಮಂತ್ರಿಗಳ ಹತ್ತಿರ ಮಾತನಾಡಿ ಮಾಡಿಸಿ ಕೊಡುತ್ತೇನೆಂದು. ಮಾಡಿಸಿಕೊಡುತ್ತಾರೆ ಬಿಡಿ.

ಅಧ್ಯಕ್ಷರು: ರೇವು ನಾಯಕ್ ಬೆಳಮಗಿಯವರೇ, ತಮ್ಮ ಪ್ರಶ್ನೆ ಸಂಖ್ಯೆ 3545 ಉತ್ತರಿಸಲು ಮಂತ್ರಿಗಳು ಸಮಯ ಕೇಳಿದ್ದಾರೆ. ಸಮಾಜ ಕಲ್ಯಾಣ ಮಂತ್ರಿಯವರೇ, ಇದು ತುಂಬಾ ಸಿಂಪಲ್ ಪ್ರಶ್ನೆಯಿದೆ, ಇದಕ್ಕೆ ಉತ್ತರಿಸಲು ಸಮಯ ಬೇಕೇ?

ಶ್ರೀ ಎಂ.ಕೃಷ್ಣಾರೆಡ್ಡಿ: ಅವರು ವಿವರವನ್ನು ಕೇಳಿದ್ದಾರೆ. ಅದಕ್ಕೋಸ್ಕರ ಸಮಯ ಕೇಳಿದ್ದೇನೆ.

ಶ್ರೀ ರೇವು ನಾಯಕ್ ಬೆಳಮಗಿ: ಸನ್ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ನಾನು ಅದಕ್ಕೇ ಉತ್ತರ ಕೊಡಲು ಸಮಯ ಏಕೆ ಕೇಳಿದ್ದೀರಿ ಎಂದು ಮಂತ್ರಿಗಳನ್ನು ಕೇಳಿದೆ.

ಶ್ರೀ ರೇವು ನಾಯಕ್ ಬೆಳಮಗಿ: ಅಧ್ಯಕ್ಷರೇ, ನನ್ನ ಅನಿಸಿಕೆ ಹೇಳಿಬಿಡುತ್ತೇನೆ. ಉತ್ತರ ಆಮೇಲೆ ಕೊಡಲಿ. ನಮ್ಮ ಜಿಲ್ಲೆಯಲ್ಲಿ ಏನು ಎಸ್‌ಸಿ/ಎಸ್‌ಟಿ ಕಾರ್ಪೊರೇಷನ್‌ಗೆ ಎಸ್‌ಸಿ:ಎಸ್‌ಟಿ ಜನಾಂಗದವರು ಹೋದರೆ ಅವರಿಗೆ ಫಾರಂ ಕೊಡುತ್ತಿಲ್ಲ. ಫಾರಂಗೆ ದುಡ್ಡು ತೆಗೆದುಕೊಂಡು ಬೇರೆಯವರಿಗೆ ಅಲ್ಲಿಯ ಅಧಿಕಾರಿ ಕೊಡುತ್ತಿದ್ದಾರೆ. ನಾನೇ ಸ್ವತಃ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಅಲ್ಲಿ ಈ ರೀತಿ ನಡೆಯುತ್ತಿದೆಯಾದ ಕಾರಣ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದೇನೆ.

ಅಧ್ಯಕ್ಷರು: ಈಗ ಒಂದು ಕೆಲಸ ಮಾಡೋಣ. ಮಂತ್ರಿಗಳು ಟೈಮ್ ಕೇಳಿದ್ದಾರೆ.

ಶ್ರೀ ರೇವು ನಾಯಕ್: ಇದಕ್ಕೆ ಉತ್ತರಿಸಲು ಅಂಥ ಟೈಮ್ ಏನೂ ಬೇಕಾಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದರಲ್ಲಿ ಏನಿದೆ ತಾವು ನೋಡಿ. ಹಾಲಿ ಇರುವಂಥ ಸ್ಕೀಮ್. ಅಲ್ಲಿರುವಂಥ ಅಧಿಕಾರಿ ಅವರಿಗೆ ಅವಮಾನ ಮಾಡುತ್ತಿದ್ದಾರೆ, 5000 ರೂ.ಗಳನ್ನು ಲಂಚ ಕೊಟ್ಟರುವವರಿಗೆ ಕೆಲಸ ಮಾಡಿಕೊಡುತ್ತಿದ್ದಾನೆ, ಆದರೆ ನಾನು ಹೇಳುವಂಥ ವ್ಯಕ್ತಿಗಳಿಗೆ ಫಲಾನುಭವಿಗಳಿಗೆ ಅನುಕೂಲವಾಗುತ್ತಿಲ್ಲವೆಂದು ಹೇಳಿ ಪ್ರಶ್ನೆ ಕೇಳಿದರೆ ಉತ್ತರ ಕೊಡುವುದಕ್ಕೆ ಟೈಮ್ ಏಕೆ ಬೇಕು? ಅಧ್ಯಕ್ಷರೇ, ತಾವೇ ಓದಿನೋಡಿ. ಇಲ್ಲಿ ಉತ್ತರ ತಾವು ಓದಿ ಸ್ವಾಮಿ. ಉತ್ತರವನ್ನು ಸರ್ಕಾರದ ಅಧಿಕಾರಿಗಳಿಂದ ಕೊಡಿಸುವುದೇ ಬೇಡ. ನೇರವಾಗಿರುವ ಸ್ಕೀಮ್. ಒಬ್ಬ ಎಸ್‌ಸಿ ಜನಾಂಗದಿಂದ ಬರತಕ್ಕಂಥ ಪ್ರತಿನಿಧಿ, ಇಂತಹ ಅನ್ಯಾಯವಾಗುತ್ತಿದೆ, ಎಂದು ಹೇಳಿದಾಗ ಅದನ್ನು ಸರಿಪಡಿಸುತ್ತೇನೆ, ಏನು ಬೇಕು ಅದನ್ನು ಮಾಡಿಕೊಡುತ್ತೇನೆ ಎಂದು ಹೇಳಬೇಕಾದವರು ಉತ್ತರ ನಂತರ ಕೊಡುತ್ತೇನೆ ಎಂದರೆ ಅರ್ಥ ಏನು? ಇದರಲ್ಲಿ ಕಷ್ಟವಾಗುವಂಥಾದ್ದು ಏನಿದೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ನಾನು ಸರ್ಕಾರದ ಕಡೆಯಿಂದ ಉತ್ತರ ಕೊಡುವಾಗ ಜವಾಬ್ದಾರಿಯಿಂದ ಕೊಡಬೇಕು. ಇಲ್ಲಿ ಅವರು ಕೇಳಿರುವುದಕ್ಕೆ ಲಂಬಾಣಿ ಜನಾಂಗಕ್ಕೆ ಸ್ವಂತ ಭೂಮಿ ಇದ್ದರೆ ಸರ್ಕಾರವು ಕೊಟ್ಟಿದೆ. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಕ್ಕೆ ಇವರು ಸೇರಿದ್ದರೂ ಅವರಿಗೂ ಕೊಡುತ್ತೇವೆ. ಎಷ್ಟು ತಾಂಡಗಳು ಇವೆ ಎಂದು ಕೇಳುತ್ತಿದ್ದಾರೆ. ಇದರ ಜೊತೆಗೆ ಎಷ್ಟು ತಾಂಡಗಳು ಇದೆ ಎಂದು ಕೇಳಬೇಕು. ಇಲ್ಲೆ ಎಷ್ಟು ಜನಕ್ಕೆ ಈಗಾಗಲೇ ಅರ್ಜಿ ಕೊಟ್ಟದ್ದೀರಿ, ಎಷ್ಟಕ್ಕೆ ಬಾವಿ ಕೊರೆದಿದ್ದಾರೆ ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ಬಂದಿಲ್ಲ ಎಂದು. ಇಲ್ಲದಿದ್ದರೆ ಲಂಬಾಣಿಗಳಿಗೂ ಕೂಡ ಇದು ಅನ್ವಯಿಸುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎಷ್ಟು ತಾಂಡಗಳು ಇವೆ ಎಂದು ಅವರು ಕೇಳೇ ಇಲ್ಲ. ತಾವು ಪ್ರಶ್ನೆ ಓದಿ.

ಶ್ರೀ ಕೆ.ಎಂ.ಕೃಷ್ಣಾ ರೆಡ್ಡಿ: ಏನೋ ಅಧಿಕಾರಿ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೋತ್ತರ ಸಮಯವನ್ನು ಒಂದು ಕ್ಷಣ ವ್ಯರ್ಥ ಮಾಡುವುದಕ್ಕೆ ನಾನು ಸಿದ್ಧವಿಲ್ಲ. ಅಷ್ಟೇ ಅವರ ಅಳಲು. ಅಧಿಕಾರಿಗಳು ಭ್ರಷ್ಟರಿದ್ದಾರೆ. ಇವರು ಹೋದರೆ ಯಾರೂ ಒಬ್‌ಲೈಜ್ ಮಾಡುತ್ತಿಲ್ಲ. ಇವರಿಗೆ ಉಪಕಾರ ಮಾಡುವುದು ಬೇಡ. ಆ ಜನಾಂಗದವರಿಗೆ ಏನು ಸ್ಕೀಂ ಇದೆ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇವರು ಹೇಳಿದಂತಹ ಬೆನಿಫಿಷಿಯರೀಸ್‌ಗೆ ಕೊಡುತ್ತಿಲ್ಲ. ಐದು ಸಾವಿರ ರೂಪಾಯಿ ಕೊಡುವವರಿಗೆ ಮಾಡುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವರು ಹೇಳಿದಂತಹವರಿಗೆ ತಕ್ಷಣ ಭಾವಿ ತೆಗೆಯುವಂತಹ ವ್ಯವಸ್ಥೆ ಮಾಡಿ. ಏನಿದೆ ಇದರಲ್ಲಿ ಬೇರೆ? ನಿಮ್ಮ ಉತ್ತರ ಬೇಡವೇ ಬೇಡ. ನಾವು ಇದನ್ನೇ ಅಕ್ಸೆಪ್ಟ್ ಮಾಡುತ್ತೇವೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ದೂರು ಹೇಳುತ್ತಿದ್ದಾರೆ, ಆ ಅಧಿಕಾರಿ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆ ಮಾಡುತ್ತೇವೆ.

SRI H.N.NANJE GOWDA: This question pertains to a policy matter. ಏನೂ ಕೇಳಿಲ್ಲ ಅವರು. ಪಾಲಿಸಿ ಮ್ಯಾಟರ್ ಇದೆ. ಇದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ? ಈಗ ತಾಂಡಗಳಲ್ಲಿರುವ ಲಂಬಾಣಿ ಜನಾಂಗದವರಿಗೆ ಸ್ವಂತ ಭೂಮಿ ಇದ್ದಲ್ಲಿ ಸರ್ಕಾರವು ಅವರಿಗೆ ಉಚಿತವಾಗಿ ಕೊಳವೆಬಾವಿಗಳನ್ನು ತೆಗೆಯಲು ಯೋಜನೆ ಏನಾದರೂ ಹಾಕಿಕೊಂಡಿದೆಯೇ? **It is a policy matter.** ಹಾಗಾದಲ್ಲಿ ಆ ರೀತಿ ಭೂಮಿ ಇದ್ದರೂ ಕೂಡ ಗುರುತಿಸುವ ಕೆಲಸ ಪ್ರಾರಂಭಿಸಲಾಗಿದೆಯೇ? ಪ್ರಾರಂಭವಾಗದಿದ್ದಲ್ಲಿ, ಈ ರೀತಿ ಗುರುತಿಸುವ ಕೆಲಸ ಹಾಗೂ ಕೊಳವೆ ಬಾವಿ ತೆಗೆಯುವ ಕಾರ್ಯವನ್ನು ಯಾವಾಗಿನಿಂದ ಕೈಗೆ ತೆಗೆದುಕೊಳ್ಳಲಾಗುವುದು? ಇದು ಪಾಲಿಸಿ ಮ್ಯಾಟರ್. ಅದಕ್ಕೆ ಡಿಟೈಲ್ಸ್ ಪರ್ಟಿಕ್ಯೂಲರ್ ಆಗಿ ಕೇಳಿಲ್ಲ. **This pertains to a policy matter. It should not be difficult for the Government to pronounce the policy.**

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಲಂಬಾಣಿಗಳು ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿರತಕ್ಕಂಥವರು. ಅವರಿಗೆ ಕೂಡ ಕೊಳವೆಬಾವಿ ಹಾಕಿಸತಕ್ಕಂಥ ಒಂದು ಕಾರ್ಯಕ್ರಮ ನಮ್ಮಲ್ಲಿ ಇದೆ. ಮತ್ತು ಲಂಬಾಣಿಗಳಿಗೆ ಈಗಾಗಲೇ ಅರ್ಜಿಗಳನ್ನು ಕೊಟ್ಟಿರತಕ್ಕಂಥ ಕಡೆ ಕೆಲವು ಕೊಳವೆಬಾವಿಗಳು ಹಾಕಿಸತಕ್ಕಂಥಾದ್ದು ಇದೆ. ಮಾನ್ಯ ಸದಸ್ಯರು ಹೇಳುವಂತಹ ವಿಚಾರದಲ್ಲಿ ನಿರ್ದಿಷ್ಟವಾದ ದೂರು ಇದ್ದರೆ ಹೇಳಿ. ಆ ರೀತಿ ಅಧಿಕಾರಿಗಳು ಇದ್ದರೆ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ: ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸ್ವತಃ ನಾನು ಅರ್ಜಿ ಕೊಡಿ ಎಂದು ಕೇಳುವುದಕ್ಕೆ ಹೋಗಿದ್ದೆ. ಅಲ್ಲಿರುವಂತಹ ಆಫೀಸರ್ ಸೂಪರ್‌ವೈಸರ್ ಚಿತಾಪುರಕ್ಕೆ, ಚಿಂಚೋಳಿಗೆ ಹೋಗಿದ್ದಾರೆ ಎಂದು ನೆವ ಹೇಳುತ್ತಿದ್ದಾರೆ. ಹರಿಜನ ಬಾಂಧವರು, ಲಂಬಾಣಿ ಜನಾಂಗದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ನಮ್ಮ ಮನೆಗೆ ಬಂದರು. ನಾನು ಆಗ ಸ್ವತಃ ಜೀಪು ತೆಗೆದುಕೊಂಡು ಹೋದೆ. ಹೋದರೆ ಈ ಮಾತು ನನಗೆ ಹೇಳಿದರು. ಮತ್ತೊಮ್ಮೆ ನಾನು ಹೇಳಿದೆ, ಬೋರ್ ಹಾಕಬೇಕಾದರೆ ಯಾರು ಐಜಿನ್ನಿ ಕೊಟ್ಟರೂ ಅದಕ್ಕೆ ಸೀರಿಯಲ್ ನಂಬರ್ ಇಲ್ಲ. ಅದಕ್ಕೆ ಯಾರು ಐದು ಸಾವಿರ ರೂಪಾಯಿ ಕೊಡುತ್ತಾರೆ ಅವರು ಅಲ್ಲಿಗೆ ಹೋಗುವುದು. ಅಲ್ಲಿ ಹೋಗಿ ಮೂರು ಕೊಳವೆಬಾವಿ ಹಾಕಿದ್ದಾರೆ. ರಾತ್ರಿ ನೋಡಿ ಬಂದೆ, ಮತ್ತೆ ಮುಂಜಾನೆ ಹೋದೆ. ಈ ರೀತಿ ಏಕೆ ಆಗುತ್ತಿದೆ? ಅವರ ಮೇಲೆ ಕ್ರಮ

ಕೈಗೊಳ್ಳುತ್ತೀರೋ? ಅಲ್ಲಿನ ಹರಿಜನ ಬಾಂಧವರಿಗೆ ಪದೇಪದೇ ಹೇಳಿದೆ. ಪಾಪ ಹತ್ತು ಸಲ ಓಡಾಡಿದರು. ಅವರು ಏನು ಹೇಳಿದರೆಂದರೆ ನಿಮ್ಮ ಹತ್ತಿರ ನಾವು ಏಕೆ ಬರಬೇಕು ಎಂದರೆ ಐದು ಸಾವಿರ ಕೊಟ್ಟು ಮಾಡಿಕೊಂಡೆವು ಎಂದು ಹೇಳಿದರು. ನಾವು ಶಾಸಕರಾಗಿ ಏನು ಉಳಿಯುತ್ತದೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಖಂಡಿತವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಹೇಳುವಂತಹ ರೀತಿಯನ್ನು ನೋಡಿದರೆ ಫಲಾನುಭವಿಗಳಿಗೆ ಅವರು ಕೊಡುತ್ತಿಲ್ಲ. ಐದು ಸಾವಿರ ರೂಪಾಯಿ ಕೊಟ್ಟು ನಾವು ಮಾಡಿಕೊಂಡು ಬರುತ್ತೇವೆ, ಎಂ.ಎಲ್.ಎ.ಏಕೆ ಬೇಕು ಎಂದು ಕೇಳುತ್ತಿದ್ದಾರೆ. ಅವರು ಎಂಎಲ್.ಎ ಆಗಿ ಮುಂದುವರೆಯಬೇಕೋ ಬೇಡವೂ ಹೇಳಿ. ಅಲ್ಲಿ ಲಂಚ ಕೊಡುವವರಿಗೆ ಐದು ಸಾವಿರ ರೂಪಾಯಿ ಕೊಟ್ಟರೆ ಬೋರ್ ಹಾಕುವುದಾದರೆ ಅದನ್ನು ಹೇಳಿಬಿಡಿ. ಇಲ್ಲದಿದ್ದರೆ ಅವರು ಶಾಸಕರಿದ್ದಾರೆ, ಮರ್ಯಾದೆಯಿಂದ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡು ಅವರು ಬೋರ್‌ವೆಲ್ ತೆಗೆಯುವುದಕ್ಕೆ ಕಾನೂನು ಪ್ರಕಾರ ವ್ಯವಸ್ಥೆ ಮಾಡಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಇದನ್ನು ಮೊದಲ ಬಾರಿಗೆ ಅವರು ನನ್ನ ಗಮನಕ್ಕೆ ತರುತ್ತಿದ್ದಾರೆ. ತಕ್ಷಣ ಅಧಿಕಾರಿ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಮೈಸೂರು ನಗರದಲ್ಲಿ ಹುಡ್ಕೋ ಕಾಮಗಾರಿಗಳು.

483 (3423)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಹುಡ್ಕೋ ಸಂಸ್ಥೆಯ ನೆರವಿನಿಂದ ಯಾವ ಯಾವ ಕೆಲಸಗಳನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆಯೇ?

ಆ) ಈ ಕೆಲಸಗಳ ಅಂದಾಜು ವೆಚ್ಚ ಎಷ್ಟು;

ಇ) ಈ ಕೆಲಸಗಳನ್ನು ಯಾವಾಗ ಪ್ರಾರಂಭಿಸಿ ಹಾಗೂ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಹುಡ್ಕೋ ನೆರವಿನಿಂದ ಮೈಸೂರು ನಗರದಲ್ಲಿ ಯಾವುದೇ ನಿರ್ದಿಷ್ಟ ಕೆಲಸವನ್ನು ಕೈಗೊಳ್ಳಲು ಸಧ್ಯಕ್ಕೆ ನಿರ್ಧರಿಸಿರುವುದಿಲ್ಲ.